## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡ ರವರು ನಿಯಮ-330ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ

**ಸೂಚನೆ:-**

ಭೂ ಕಂದಾಯ ಅಧಿನಿಯಮ ಮತ್ತು ನಿಯಮಗಳು ಅಥವಾ ಸರ್ಕಾರದ ಯಾವುದೇ ಸಾಮಾನ್ಯ ಯೋಜನೆಗಳ ಅನುಸಾರ ಆಗಿರುವ ಪ್ರಸ್ತಾವನೆಗಳು ಕರ್ನಾಟಕ ಸರ್ಕಾರ (ವಿಷಯಗಳ ವ್ಯವಹಾರ) ನಿಯಮಗಳ ತಿದ್ದುಪಡಿಯು ಕರ್ನಾಟಕ ಭೂ ಕಂದಾಯ ನಿಯಮಗಳ ವಿರುದ್ಧವಾಗಿ ಮಂಜೂರಿ/ಗುತ್ತಿಗೆಯ ಎಲ್ಲಾ ಪ್ರಸ್ತಾವನೆಗಳನ್ನು ಮಂತ್ರಿಮಂಡಲಕ್ಕೆ ಸಲ್ಲಿಸುವಲ್ಲಿ ಪರಿಣಮಿಸಿದ್ದಿತು ಎಂಬುದಾಗಿ ಲೆಕ್ಕಪರಿಶೋಧನೆಯು ತನ್ನ ತೀರ್ಮಾನಕ್ಕೆ ಬರುತ್ತದೆ. ಪರಿಣಾಮವಾಗಿ, ಸರ್ಕಾರದ ವ್ಯವಹಾರಗಳ ನಡೆಸುವಿಕೆಯನ್ನು ಸುಲಭ / ಸುಲಲಿತಗೊಳಿಸುವ ಸಲುವಾಗಿ ರೂಪಿಸಲಾಗಿದ್ದ ಸಾಧನವಾಗಿದ್ದಂತಹ ಕರ್ನಾಟಕ ಸರ್ಕಾರ (ವಿಷಯಗಳ ವ್ಯವಹಾರ) ನಿಯಮಗಳ ತಿದ್ದುಪಡಿಯು ಕರ್ನಾಟಕ ಭೂ ಅಧಿನಿಯಮ / ನಿಯಮಗಳ ತಿದ್ದುಪಡಿಯ ಅನುದ್ದಿಷ್ಟ ಪ್ರತಿಫಲಗಳನ್ನು ಹೊಂದಿದ್ದಿತು. ಫೂಟ್ 'ಬಿ' ಖರಾಬು ಗುಂಡುತೋಪು, ಕೆರೆತಲ, ಸ್ಮಶಾನ ಇತ್ಯಾದಿ ಸಾರ್ವಜನಿಕ ಭೂಮಿಯು ತತ್ಪರಿಣಾಮವಾದಂತಹ ಮಂಜೂರಿಯು ಸಾರ್ವಜನಿಕ ಉದ್ದೇಶಗಳಿಗಾಗಿ ಹಾಗೂ ಪರಿಸರೀಯಾಗಿ ಅತಿಸೂಕ್ಷ್ಮವಾಗಿರುವ ಪ್ರದೇಶಗಳಿಗಾಗಿ ಮೀಸಲಿರಿಸಲಾಗಿದ್ದಂತಹ ಸರ್ಕಾರಿ ಭೂಮಿಯು ನಷ್ಟವಾಗಿರುವ ಬಗ್ಗೆ, ಹಾಗೂ ಕರ್ನಾಟಕ ಭೂ ಕಂದಾಯ ನಿಯಮಗಳ ಅಡಿಯಲ್ಲಿ ಮಂಜೂರಾತಿಗಾಗಿ / ಗುತ್ತಿಗೆಗಾಗಿ ಪ್ರತಿಬಂಧಿಸಲಾಗಿರುವ ಭೂಮಿಯ ಬಗ್ಗೆ ಮತ್ತು ಗೋಮಾಳ ಭೂಮಿಯನ್ನು ಸಾರ್ವಜನಿಕ ಹಿತಾಸಕ್ತಿಗೆ ಹೊರತಾಗಿ ಖಾಸಗಿಯವರಿಗೆ ನೀಡಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಹೇಳಿಕೆ:**

ಸರ್ಕಾರಿ ಜಮೀನುಗಳಲ್ಲಿ ಮಾಡುತ್ತಿರುವ ಸಾಗುವಳಿಯನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94ಎ, 94ಬಿ ಹಾಗೂ 94ಎ(4)ರಡಿಯಲ್ಲಿ ನಮೂನೆ-50, 53 ಹಾಗೂ 57ರಡಿ ಸ್ವೀಕರಿಸಿರುವ ಅರ್ಜಿಗಳನ್ನು ಇತ್ಯರ್ಥಗೊಳಿಸಲು ಅವಕಾಶ ಕಲ್ಪಿಸಲಾಗಿದೆ. ಹಾಗೆಯೇ ಜಮೀನು ಸಕ್ರಮಗೊಳಿಸುವಾಗ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108-ಐ ರಲ್ಲಿ ಉಲ್ಲೇಖಿಸಿರುವ ಜಮೀನುಗಳಾದ ಕಲಂ 71ನೇ ಪ್ರಕರಣದ ಮೇರೆಗೆ ವಿಶೇಷ ಉದ್ದೇಶಗಳಿಗಾಗಿ ಒಪ್ಪಿಸಿದ ಭೂಮಿಗಳು ಮತ್ತು ದೇವರಕಾಡು, ಉರ್ದುವೆ, ಗುಂಡುತೋಪು, ಕೆರೆಯ ತಳಪಾಯ, ಫೋಟ್ ಖರಾಬ್, ಹಳ್ಳ, ಸ್ಮಶಾನಗಳು ಎಂಬುದಾಗಿ ಕಂದಾಯ ದಾಖಲೆಗಳಲ್ಲಿ ವರ್ಣಿಸಲಾದ ಭೂಮಿಗಳು ಮತ್ತು ಸಾರ್ವಜನಿಕ ಉದ್ದೇಶಕ್ಕಾಗಿ ಸರ್ಕಾರದ ಅಭಿಪ್ರಾಯದ ಅಗತ್ಯಪಡಿಸಿದ ಅಂಥ ಭೂಮಿಗಳನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ.

ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108-ಎನ್ ರಂತೆ ರಾಜ್ಯ ಸರ್ಕಾರವು ತಾನಾಗಿಯೇ ಅಥವಾ ಪ್ರಾದೇಶಿಕ ಆಯುಕ್ತರ ಅಥವಾ ಜಿಲ್ಲಾಧಿಕಾರಿಯ ಶಿಫಾರಸಿನ ಮೇಲೆ ಯಾವುದೇ ಮೊಕ್ಕದಮ ಅಥವಾ ಮೊಕದ್ದಮೆಗಳ ವರ್ಗಗಳ ಸಂದರ್ಭಗಳಲ್ಲಿ ಈ ನಿಯಮಗಳ ಯಾವುದೇ ಉಪಬಂಧಗಳನ್ನು ನ್ಯಾಯಸಮ್ಮತ ಮತ್ತು ಸಾಧ್ಯವಾದಷ್ಟು ಸಡಿಲಿಕೆ ಮಾಡಬಹುದೆಂದು

ಅಭಿಪ್ರಾಯಪಟ್ಟರೆ ಅಂಥ ನಿರ್ದೇಶನದ ಅನುಸಾರ ಅಂಥ ಮೊಕದ್ದಮೆ ಅಥವಾ ಮೊಕದ್ದಮೆಗಳ ವರ್ಗಗಳಲ್ಲಿ ಆದೇಶಗಳಲ್ಲಿ ನಿರ್ದಿಷ್ಟಗೊಳಿಸಬಹುದಾದಂತ ಅಂಥ ಷರತ್ತುಗಳು ಮತ್ತು ಅದಾದ ಮೇಲೆ ಮಂಜೂರು ಮಾಡಬಹುದಾದ ಭೂಮಿಗಳಿಗೆ ಒಳಪಟ್ಟು ರಾಜ್ಯ ಸರ್ಕಾರವು ಅಂಥ ಸಡಿಲಿಕೆಗಾಗಿ ಕಾರಣಗಳನ್ನು ಅಭಿಲೇಖಿಸಿ ಅಂಥ ಸಡಿಲಿಕೆಯನ್ನು ಆದೇಶದ ಮೂಲಕ ನಿರ್ದೇಶಿಸಲು ಅವಕಾಶವಿರುತ್ತದೆ.

ಮುಂದುವರಿದು, ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 27ರಲ್ಲಿ ರಾಜ್ಯ ಸರ್ಕಾರದ ಅಧಿಕಾರಗಳ ಬಗ್ಗೆ ತಿಳಿಸಲಾಗಿದ್ದು, ಸದರಿ ನಿಯಮಗಳಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು ತಾನಾಗಿಯೇ ಅಥವಾ ಡಿವಿಜನಲ್ ಕಮೀಷನರ್ ಅಥವಾ ಡೆಪ್ಯುಟಿ ಕಮೀಷನರ್ ಶಿಫಾರಸ್ಸಿನ ಮೇಲೆ, ಯಾವುದೇ ಪ್ರಕರಣದ ಅಥವಾ ಪ್ರಕರಣಗಳ ವರ್ಗಗಳ ಸಂದರ್ಭದಲ್ಲಿ, ಈ ನಿಯಮಗಳ ಯಾವುವೇ ಉಪ-ಬಂಧಗಳನ್ನು ಸಡಿಲಗೊಳಿಸುವುದು ನ್ಯಾಯವೆಂದು ಮತ್ತು ಯುಕ್ತವೆಂದು ಅಭಿಪ್ರಾಯಪಟ್ಟರೆ, ಅದು ಅಂಥ ಸಡಿಲಿಕೆಗೆ ಕಾರಣಗಳನ್ನು ಅಭಿಲೇಖಿಸಿ, ಆದೇಶಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಅಂಥ ಸಡಿಲಿಕೆಗೆ ಆದೇಶ ಮೂಲಕ ನಿರ್ದೇಶಿಸಬಹುದು ಮತ್ತು ಅನಂತರ ಅಂಥ ನಿರ್ದೇಶನಕ್ಕನುಸಾರವಾಗಿ ಅಂಥ ಪ್ರಕರಣದಲ್ಲಿ ಅಥವಾ ಪ್ರಕರಣಗಳ ವರ್ಗಗಳ ಸಂಬಂಧದಲ್ಲಿ ಭೂಮಿಯನ್ನು ಮಂಜೂರು ಮಾಡಲು ಅವಕಾಶವಿರುತ್ತದೆ.

ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ಮೊದಲನೇ ಅನುಸೂಚಿಯ ಕ್ರಮ ಸಂಖ್ಯೆ 12 ರನ್ವಯ ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಮತ್ತು ಈ ಕಾಯ್ದೆಯನ್ವಯ ರಚಿಸಲಾಗಿರುವ ನಿಯಮಗಳಿಗೆ ಅಥವಾ ಇತರೆ ಕಾಯ್ದೆ ಅಥವಾ ನಿಯಮಗಳಿಗೆ ಅಥವಾ ಸರ್ಕಾರದ ಅನುಮೋದಿತ ಸಾಮಾನ್ಯ ಯೋಜನೆಗಳಿಗನುಸಾರವಿರದಂತಹ ಸರ್ಕಾರಿ ಜಮೀನನ್ನು ತಾತ್ಕಾಲಿಕವಾಗಿಯಾಗಲೀ ಅಥವಾ ಖಾಯಂ ಆಗಿ ಮಾರಾಟ, ಮಂಜೂರು ಅಥವಾ ಗುತ್ತಿಗೆ ನೀಡುವಂತಹ ಪ್ರಸ್ತಾವನೆಗಳಿಗೆ ಸಚಿವ ಸಂಪುಟದ ಅನುಮೋದನೆ ಅವಶ್ಯಕವಾಗಿರುತ್ತದೆ.

ಸಂಖ್ಯೆ: ಆರ್‌ಡಿ 91 ಎಲ್‌ಜಿಕ್ಯೂ 2026

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು